**ಸಾಕ್ಷಿಯನ್ನು ದಿಃ 05.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಮಗನಿಗೆ ಅಪಘಾತ ಆದಾಗ 9 ನೇ ತರಗತಿಯಲ್ಲಿ ಕಲಿಯುತ್ತಿದ್ದ. ಈಗ 11 ನೇ ತರಗತಿಗೆ ಹೋಗಬೇಕಿತ್ತು ಆದರೆ ಹೋಗುತ್ತಿಲ್ಲ. 10 ನೇ ತರಗತಿಯಲ್ಲಿ ನನ್ನ ಮಗ ಉತ್ತೀರ್ಣನಾಗಿದ್ದಾನೆ. 10 ನೇ ತರಗತಿ ಅಂಕಪಟ್ಟಿಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಬೆಟ್ಟದ ಪುರ ಸರ್ಕಾರಿ ಶಾಲೆಯಲ್ಲಿ ಕಲಿತಿರುತ್ತಾನೆ. ನನ್ನ ಮಗ ಈಗಲೂ ಕೂಡ ವಿದ್ಯಾಭ್ಯಾಸ ಮುಂದುವರಿಸಿದ್ದಾನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ. ಅಪಘಾತ ಸ್ಥಳ ಸೀಗೂರು ಗೇಟ್ ಆಗಿರುತ್ತದೆ. ಅಪಘಾತ ಜಾಗಕ್ಕೂ ನಮ್ಮ ಮನೆಗೂ ಅರ್ಧ ಕಿ.ಮೀ ಆಗುತ್ತದೆ. ಸ್ಥಳೀಯರು ನಮಗೆ ಕರೆ ಮಾಡಿ ಅಪಘಾತದ ವಿಚಾರ ಹೇಳಿರುತ್ತಾರೆ. ಅಪಘಾತ ಬೈಕ್ ನಿಂದ ಆಗಿದೆ. ಅದರ ನಂಬರ್ ನೆನಪಿಲ್ಲ. ಅದೇ ಬೈಕ್ ನಲ್ಲಿ ನನ್ನ ಮಗನನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಬ್ಯಾಂಡೇಜ್ ಹಾಕಿಸಿ ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಅಪಘಾತದ ಬಗ್ಗೆ ಮಾಹಿತಿ ನೀಡಿದ್ದೇವೆ. ಪಿರಿಯಾಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಆರೋಪಿತ ಬೈಕ್ ಗೂ ನನ್ನ ಮಗನಿಗೂ ಆದ ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ಬಿದ್ದು ಗಾಯಗೊಂಡಿದ್ದಾನೆ ಎಂದರೆ ಸರಿಯಲ್ಲ.

2. ಮೈಸೂರಿನ ಆಸ್ಪತ್ರೆಯಲ್ಲಿ ನನ್ನ ಮಗ ಬಿದ್ದು ಗಾಯಗೊಂಡಿದ್ದಾನೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗ ಬಿದ್ದು ಗಾಯಗೊಂಡಿದ್ದರೂ ನಾವು, ಪೋಲೀಸರು, ಆರೋಪಿತ ವಾಹನದ ಚಾಲಕ ಹಾಗೂ ಮಾಲೀಕರು ಶಾಮಿಲಾಗಿ ಎದುರುದಾರರ ಮೇಲೆ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆದ ಕಾರಣವೇ ನಾವು ವಿಳಂಬವಾಗಿ ದೂರು ನೀಡಿದ್ದೇವೆ ಎಂದರೆ ಆಸ್ಪತ್ರೆಯಲ್ಲಿದ್ದ ಕಾರಣ ವಿಳಂಬವಾಗಿ ದೂರು ನೀಡಿದ್ದೇವೆ ಎನ್ನುತ್ತಾರೆ. ನನ್ನ ಮಗ ಒಂದು ವಾರ ಚಿಕಿತ್ಸೆ ಪಡೆದಿದ್ದು ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಬಿಡುಗಡೆಗೊಳಿಸಿದಾಗ ನನ್ನ ಮಗ

ಆರೋಗ್ಯವಾಗಿದ್ದ ಎಂದರೆ ಕಾಲು ನೋವು ಇತ್ತು ಎನ್ನುತ್ತಾರೆ. ಬಿಡುಗಡೆಯಾದ ನಂತರ 10-12 ಬಾರಿ ಆಸ್ಪತ್ರೆಗೆ ಹೋಗಿದ್ದಾನೆ. ನಾವು ಮಧುರಾಮ್ ವೈದ್ಯರ ಬಳಿ ತೋರಿಸಿದ್ದೇವೆ. ಈ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಮಗನಿಗೆ ಅಪಘಾತದಿಂದ ಕಾಲು ನಡೆದಾಡಲು, ಮಡಿಚಲು ಇತ್ಯಾದಿ ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ವಿದ್ಯಾರ್ಥಿಯಾಗಿದ್ದ ಕಾರಣ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆತ ಏನು ಸಂಪಾದನೆ ಮಾಡುತ್ತಿರಲಿಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿದ ಔಷಧಿ ಬಿಲ್ಲುಗಳಲ್ಲಿ ಸೀಲು ಸಹಿಗಳಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಚಿಕ್ಕ ವಯಸ್ಸಾದ ಕಾರಣ ಗಾಯದಿಂದ ಗುಣಮುಖನಾಗಿ ಆರೋಗ್ಯವಾಗಿದ್ದಾನೆ ಎಂದರೆ ಸರಿಯಲ್ಲ.

3. ಕೊನೆಯದಾಗಿ ಈಗ 15 ದಿನದ ಹಿಂದೆ ಆಸ್ಪತ್ರೆಗೆ ತೋರಿಸಿರುತ್ತೇನೆ. ಮೂಳೆ ಕೂಡಿಕೊಂಡು ಆರೋಗ್ಯವಾಗಿದ್ದಾನೆ ಎಂದರೆ ಸರಿಯಲ್ಲ. ಉಪಕರಣ ತೆಗೆಸಬೇಕು ಎಂದು ವೈದ್ಯರು ಬರವಣಿಗೆಯಲ್ಲಿ ಕೊಟ್ಟಿದ್ದಾರೆ ಅದನ್ನು ಹಾಜರು ಪಡಿಸಿದ್ದೇನೆ. ಅಪಘಾತ ಬೈಕ್ ಸವಾರನ ನಿರ್ಲಕ್ಷ್ಯತನದಿಂದ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಬಿದ್ದು ಗಾಯಗೊಂಡಿದ್ದಾನೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.